# ಸ್ವಾಧ್ಯಾಯ ಮತ್ತು ಪ್ರವಚನ

ಆಧುನಿಕ ಕಾಲಘಟ್ಟದಲ್ಲಿ ಶಿಕ್ಷಣವೆಂದರೆ ಶಾಲೆ ಕಾಲೇಜುಗಳಲ್ಲಿನ ಕ್ರಮಬದ್ಧ ವ್ಯಾಸಂಗವೆಂದು ಸ್ಥೂಲವಾಗಿ ಅರ್ಥೈಸಲಾಗುತ್ತಿದೆ. ಇಂಥ ವ್ಯಾಸಂಗವನ್ನು ಮುಗಿಸಿ, ಶಾಲೆ ಕಾಲೇಜುಗಳಿಂದ ಹೊರಬಂದ ವ್ಯಕ್ತಿ ತನ್ನ ಶಿಕ್ಷಣ ಪೂರ್ಣಗೊಂಡಿತು ಎಂದು ಭಾವಿಸುತ್ತಾನೆ. ಆದರೆ ಕಲಿಕೆಯ ಪ್ರಕ್ರಿಯೆಗೆ ನಿಲುಗಡೆಯೆಂಬುದಿಲ್ಲ. ಈ ವಿಚಾರವನ್ನು ಬಹಳಷ್ಟು ಮಂದಿ ಮನಸ್ಸಿಗೆ ತಂದುಕೊಳ್ಳುವುದಿಲ್ಲ, ಅಷ್ಟೆ. ಔಪಚಾರಿಕ ಶಿಕ್ಷಣ ಮುಗಿದ ನಂತರವೂ, ಜ್ಞಾನಾರ್ಜನೆಯಲ್ಲಿ ಶ್ರದ್ಧೆಯಿರುವಾತ ತನ್ನ ಆಸಕ್ತಿಯ ಕ್ಷೇತ್ರದಲ್ಲಿ ತನ್ನಷ್ಟಕ್ಕೆ ತಾನೇ ವ್ಯಾಸಂಗ ಮುಂದುವರೆಸುತ್ತಿರುತ್ತಾನೆ, ಕೆಲವು ಮಂದಿ ವಿರಳರು ತಮ್ಮ ಜೀವಿತದ ಕೊನೆಯ ಕ್ಷಣದವರೆಗೂ ಇಂಥ ಅಧ್ಯಯನ ನಿಷ್ಠೆಯನ್ನು ಕಾಪಾಡಿಕೊಂಡಿರುತ್ತಾರೆ.

ಇಂಥ ನಿರಂತರ ಅಧ್ಯಯನ ಪ್ರವೃತ್ತಿಯನ್ನೇ ನಮ್ಮ ಹಿರಿಯರು 'ಸ್ವಾಧ್ಯಾಯ' ಎಂದು ಕರೆದಿರುವುದು. ಸ್ವಾಧ್ಯಾಯಿಯಾದಾತ ಸ್ವಯಂ ಪ್ರೇರಣೆಯಿಂದ ಅಧ್ಯಯನ ಮಾಡುತ್ತಾ, ಅದರಿಂದ ಗಳಿಸಿಕೊಂಡ ವಿಚಾರಗಳನ್ನು ಮತ್ತೆ ಮತ್ತೆ ಮನನ ಮಾಡಿ, ಹೃದ್ಗತಮಾಡಿಕೊಳ್ಳುತ್ತಾ, ತನ್ನ ಜ್ಞಾನವನ್ನು ಖಚಿತಗೊಳಿಸಿಕೊಳ್ಳುತ್ತಾನೆ; ವಿಸ್ತರಿಸಿಕೊಳ್ಳುತ್ತಾನೆ. ಬದಲಾಗಿ, ಔಪಚಾರಿಕ ಶಿಕ್ಷಣಕ್ಕಷ್ಟೇ ತನ್ನ ಓದನ್ನು ಸೀಮಿತಗೊಳಿಸಿ, ಶಾಲೆ ಕಾಲೇಜುಗಳಿಂದ ಹೊರ ಬಂದೊಡನೆಯೇ ತನ್ನ ವ್ಯಾಸಂಗವನ್ನು ಸ್ಥಗಿತಗೊಳಿಸಿಕೊಂಡಾತ ಬಹಳ ಬೇಗ 'ಓಬೀರಾಯನ ವಂಶಸ್ಥ'ನಾಗಿ 'ಕಾಲ ಹತ' (Out dated) ಎನ್ನಿಸಿಕೊಳ್ಳುತ್ತಾನೆ. ಈಗಂತೂ ಜ್ಞಾನದ ಎಲ್ಲ ವಲಯಗಳಲ್ಲೂ ಹೊಸ ಹೊಸ ಅನ್ವೇಷಣೆಗಳೂ, ಆವಿಷ್ಕಾರಗಳೂ ಕಾಣಿಸಿಕೊಳ್ಳುತ್ತಿವೆ. ಆದ್ದರಿಂದ ಒಂದು ನಿರ್ದಿಷ್ಟ ಘಟ್ಟಕ್ಕೆ ತಮ್ಮ ಶಿಕ್ಷಣ ಮುಗಿಯಿತೆಂದು ಯಾರೂ ಸಂತೃಪ್ತರಾಗಿರುವುದು ಸಾಧ್ಯವಿಲ್ಲ. ನಿರಂತರ ಅಧ್ಯಯನ ಪ್ರವೃತ್ತಿಯನ್ನು ಕಾಪಾಡಿಕೊಂಡಿದ್ದವರಿಗೆ ಮಾತ್ರ ಈ ಜ್ಞಾನ ಸ್ಫೋಟದ ಸವಾಲನ್ನು ಸ್ವೀಕರಿಸಲು ಸಾಧ್ಯವಾದೀತು.

'ಸ್ವಾಧ್ಯಾಯ' ಎಂಬ ಪದದ ಜೊತೆಗೆ ಕಾಣಿಸಿಕೊಳ್ಳುವ ಮತ್ತೊಂದು ಪದವೆಂದರೆ 'ಪ್ರವಚನ.' ಪ್ರವಚನವೆಂದರೆ, ಸ್ವಾಧ್ಯಾಯದಿಂದ ಗಳಿಸಿದ ಜ್ಞಾನವನ್ನು ಮಾತಿನ ಮೂಲಕ ಇನ್ನೊಬ್ಬರಿಗೆ ತಲುಪಿಸುವ ಕ್ರಿಯೆ, ಇದರಿಂದಾಗುವ ಪ್ರಯೋಜನಗಳು ಹಲವು. ಪ್ರವಚನದಿಂದ ಶ್ರೋತೃವಿಗೆ ಜ್ಞಾನಲಾಭವಾಗುವುದಂತೂ ಸರಿಯೇ, ಪ್ರವಚನ ಮಾಡುವಾತನೂ ಇದರಿಂದ ಬಹಳಷ್ಟು ಲಾಭ ಪಡೆಯುತ್ತಾನೆ. ಆತ ತನ್ನ ಅಧ್ಯಯನದಿಂದ ಪಡೆದ ಜ್ಞಾನವನ್ನು ಪ್ರವಚನ ಮಾಡುತ್ತಾ, ಖಚಿತಪಡಿಸಿಕೊಳ್ಳುತ್ತಾನೆ; ಆತನ ಚಿಂತನೆಗೆ ಒಂದು ಕ್ರಮಬದ್ಧತೆ ಪ್ರಾಪ್ತವಾಗುತ್ತದೆ. 'Speaking is thinking aloud' (ಮಾತಾಡುವುದೆಂದರೆ ಗಟ್ಟಿಯಾಗಿ ಆಲೋಚಿಸುವುದು) ಎಂಬ ಹೇಳಿಕೆ ಇದನ್ನೇ ಸಮರ್ಥಿಸುತ್ತದೆ. ಪ್ರವಚನ ಮಾಡುತ್ತಿರುವಾಗ ಹೊಸ ಹೊಸ ಹೊಳಹುಗಳೂ, ಚಿಂತನೆಗಳೂ ಸ್ಫುರಣಗೊಳ್ಳುವ ಸಂದರ್ಭಗಳೂ ಇರುತ್ತವೆ. 'ಸ್ವಬೋಧ ಪರಿಶುದ್ಧಿ' (ತನ್ನ ಚಿಂತನೆಯ ಪರಿಷ್ಕಾರ) ಎಂಬುದಕ್ಕೆ ಪ್ರವಚನವೇ ಅತ್ಯುತ್ತಮ ಮಾರ್ಗವೆನ್ನುತ್ತಾರೆ ತಿಳಿದವರು. ಶ್ರೋತೃಗಳ ಪ್ರತಿಕ್ರಿಯೆ ಅಥವಾ ಪ್ರಶ್ನೆಗಳಿಂದ ಪ್ರವಚನಕಾರ ತನ್ನ ವಿಚಾರಗಳನ್ನು ಪುನರ್ವಿಮರ್ಶೆ ಮಾಡಿಕೊಳ್ಳಲು ಅಥವಾ ಬೇರೊಂದು ದೃಷ್ಟಿಕೋನದಿಂದ ವಿಶ್ಲೇಷಿಸಲು ಅವಕಾಶವಾಗುತ್ತದೆ. ಹೀಗೆ ತನ್ನ ಹಾಗೂ ಇತರರ ಜ್ಞಾನದಿಗಂತದ ವಿಸ್ತರಣೆಗೆ ಸ್ವಾಧ್ಯಾಯ ಹಾಗೂ ಪ್ರವಚನ ಎರಡೂ ಅತ್ಯಗತ್ಯ. ಲೌಕಿಕ, ಪಾರಲೌಕಿಕ– ಎರಡಕ್ಕೂ ಈ ಮಾತು ಅನ್ವಯಿಸುತ್ತದೆ. ತೈತ್ತಿರೀಯ ಉಪನಿಷತ್ತು 'ಸ್ವಾಧ್ಯಾಯ ಪ್ರವಚನಗಳೇ ನಿಜವಾದ ತಪಸ್ಸು' ಎಂದು ಘೋಷಿಸುತ್ತದೆ. ಅದೇ ಉಪನಿಷತ್ತಿನಲ್ಲಿ, ಗುರುಕುಲ ಶಿಕ್ಷಣ ಮುಗಿಸಿದ ನಂತರ ಶಿಷ್ಯ ಅನುಸರಿಸಬೇಕಾದ ಆಚರಣೆಗಳ ಪಟ್ಟಿಯಲ್ಲಿ 'ಸ್ವಾಧ್ಯಾಯ ಪ್ರವಚನಗಳ ಬಗ್ಗೆ ಎಂದಿಗೂ ಔದಾಸೀನ್ಯ ಬೇಡ' ಎಂಬ ಎಚ್ಚರಿಕೆಯ ಮಾತೂ ಇದೆ.

'ಸ್ವಾಧ್ಯಾಯ, ಪ್ರವಚನ'ಗಳೆಂಬ ಜೋಡಿ ಪದಗಳಿಗೆ ಸಮಾನಾಂತರವಾಗಿ ನಾವೀಗ 'ಅಧ್ಯಯನ, ಅಧ್ಯಾಪನ'ಗಳೆಂಬ ಪದಗಳನ್ನು ಬಳಸುತ್ತೇವೆ, ನಿರಂತರ ಅಧ್ಯಯನದ ಬೆಂಬಲವಿದ್ದಾಗ ಮಾತ್ರ ಅಧ್ಯಾಪನಕ್ರಿಯೆ ಯಶಸ್ವಿಯಾಗುತ್ತದೆ; ಅರ್ಥಪೂರ್ಣವೆನ್ನಿಸಿಕೊಳ್ಳುತ್ತದೆ. ಅಧ್ಯಯನ ಪ್ರವಣತೆ ಇಲ್ಲದ ಅಧ್ಯಾಪಕ 'Old professor of modern history' ಎಂಬಂಥ ಪರಿಹಾಸ್ಯಕ್ಕೆ ಒಳಗಾಗುತ್ತಾನೆ. ಅಂಥವನು ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುವ 'ಯಂತ್ರ'ವಾಗುತ್ತಾನೆ; ಆತನ ಅಧ್ಯಾಪನ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತದೆ. ಸ್ವತಃ ನಿರಂತರ ಕಲಿಯುತ್ತಾ, ಶಿಷ್ಯರಿಗೆ ಪ್ರಾಮಾಣಿಕತೆಯಿಂದ ಕಲಿಸುವ ಅಧ್ಯಾಪಕನೇ ನಿಜವಾದ ಅರ್ಥದಲ್ಲಿ 'ಆಚಾರ್ಯ' ಎನ್ನಿಸಿಕೊಳ್ಳುತ್ತಾನೆ!

■ ವೈನತೇಯ

## ಮಾತೇ ಮುತ್ತು

★ ತನಗೆ ಸಂಬಂಧಿಸಿದ ಕರ್ತವ್ಯಗಳಲ್ಲಿ ಮಾತ್ರ ತೊಡಗಿಸಿಕೊಂಡವನು ಅಧಮ; ವ್ಯಾಪ್ತಿಯನ್ನು ತನ್ನವರಿಗೆ ಸಂಬಂಧಿಸಿದ ಕರ್ತವ್ಯಗಳಿಗೆ ವಿಸ್ತರಿಸಿಕೊಂಡವನು ಸ್ವಲ್ಪ ಉತ್ತಮನಾದಾನು, ಆದರ್ಶಪ್ರಾಯನಲ್ಲ! ಲೋಕದ ಹಿತಕ್ಕಾಗಿ ತಾನು ಮಾಡಬೇಕಾದ ಕರ್ತವ್ಯಗಳನ್ನು ನಿರ್ವಹಿಸುವವನು ಪೂಜ್ಯ.

–ಹಾ.ಮಾ.ನಾಯಕ

★ ವಂದಿಮಾಗದರನ್ನು ಇಟ್ಟುಕೊಂಡ ಭ್ರಷ್ಟ, ಪ್ರಚ್ಛನ್ನ ಜಾತಿವಾದಿಯು ಮತ್ತೊಬ್ಬ ಭ್ರಷ್ಟ ಹಾಗೂ ದುರಹಂಕಾರಿಯನ್ನು ಮಣಿಸುವುದು ಸುಲಭ.

–ಅನುಭವಾಮೃತ

★ ನಾನು ಬರೆಯುತ್ತೇನೆ ಖುಷಿಗೆ, ನೋವಿಗೆ, ರೊಚ್ಚಿಗೆ ಮತ್ತು ಹುಚ್ಚಿಗೆ ಅಥವಾ ನಂದಿಸಲಾರದ ಕಿಚ್ಚಿಗೆ.

–ಜಿ.ಎಸ್.ಶಿವರುದ್ರಪ್ಪ

★ ಕರ್ತವ್ಯವನ್ನು ಕುರಿತು ಮೊದಲು ಯೋಚನೆ ಮಾಡಿ, ಹಕ್ಕುಗಳು ಆಮೇಲೆ ಬರಲಿ.

–ಡಿ.ವಿ.ಗುಂಡಪ್ಪ

★ ಎಲ್ಲ ಕಷ್ಟಗಳಿಗೂ ತಾಳ್ಮೆಯೇ ಪರಿಹಾರ.

–ಪ್ಲಾಟಸ್

★ ಓದು ದೊಡ್ಡದು ಸರಿ. ಆದರೆ ಮನುಷ್ಯ ಓದಿ ಕಲಿಯೋದಕ್ಕಿಂತ ಹೆಚ್ಚಿನ ಸಂಗತೀನ ತಾನೇ ಬದುಕಿ ಕಲೀತಾನೆ. ಸುತ್ತಲಿನ ಬದುಕನ್ನು ನೋಡಿ ಕಲೀತಾನೆ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಕಲಿಯುವುದರಿಂದ ನೀನು ಕಲಿಸುವೆ, ಕಲಿಸುವುದರಿಂದ ನೀನು ಕಲಿಯುವೆ.

–ಲ್ಯಾಟಿನ್ ಗಾದೆ

★ ಮಹಾ ಕವಿಗಳಿರಬೇಕಾದರೆ, ಮಹಾ ರಸಿಕರೂ ಇರಬೇಕು.

–ವಾಲ್ಟ್ ವಿಟ್ಮನ್

★ ಸುಖ ದೇಹಕ್ಕೆ ಲಾಭಕರವಾದರೂ, ಬುದ್ಧಿಯ ಬೆಳವಣಿಗೆಗೆ ಕಷ್ಟ ಬೇಕು.

–ಎಂ.ಫ್ರಾಸ್ಟ

★ ಮನುಷ್ಯನ ನಿಜವಾದ ಯೋಗ್ಯತೆಯನ್ನು ತೋರಿಸುವುದು ಕಷ್ಟಗಳೇ.

–ಎಪಿಕ್ಟೆಟಸ್

★ ಸಿಕ್ಕಿಬೀಳದವರೇ ನಿಜವಾದ ಕಳ್ಳರು.

–ಗಾದೆ

★ ಕಷ್ಟ ಮನುಷ್ಯರನ್ನು ರೂಪಿಸಿದರೆ, ಸುಖ ರಾಕ್ಷಸರನ್ನು ರೂಪಿಸುತ್ತದೆ.

–ಫ್ರೆಂಚ್ ಗಾದೆ

★ ನಾವೇ ಕಲಿಯಬೇಕು, ಇಲ್ಲವಾದರೆ ಜೀವನ ಆ ಪಾಠ ಕಲಿಸುತ್ತದೆ– ಮಾತು ಆಡಿ ಅಲ್ಲ, ಏಟು ಕೊಟ್ಟು.

–ತ.ರಾ.ಸು.

★ ಆಯುಧಗಳ ನಡುವೆ ಕಾನೂನು ಮೂಕವಾಗಿರುತ್ತದೆ!

–ಮಾರ್ಕಸ್ ಸಿಸಿರೋ

★ ಕಾನೂನು ಇತರರನ್ನು ಹಿಂಸಿಸಲು ನಮ್ಮ ಕೈಯಲ್ಲಿರುವ ಚಾಟಿ ಅಲ್ಲ; ಅವಶ್ಯಕವಾದಾಗ ಉಪಯೋಗಕ್ಕೆಂದು ಇರುವ ಅಧಿಕಾರಷ್ಟೆ. ಕಾನೂನನ್ನು ಅದರ ಅಂತರಾರ್ಥ ತಿಳಿದು ಅನ್ವಯಿಸಬೇಕೇ ಹೊರತು ಅಕ್ಷರಶಃ ಅಲ್ಲ.

–ಎ.ಜಿ.ಗಾರ್ಡಿನರ್

★ ಒಳ್ಳೆಯ ಕಾನೂನು ಇನ್ನಷ್ಟು ಒಳ್ಳೆಯ ಕಾನೂನಿಗೆ ಅವಕಾಶ ಕಲ್ಪಿಸುತ್ತದೆ; ಕೆಟ್ಟ ಕಾನೂನು ಇನ್ನಷ್ಟು ಕೆಟ್ಟ ಕಾನೂನಿಗೆ ಅವಕಾಶ ಕೊಡುತ್ತದೆ.

–ರೂಸೋ